## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

### ಸರ್ವಜ್ಞನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ.24 ರ ಹೆಚ್.ಬಿ.ಆರ್ ಲೇಔಟ್‌ಗೆ ಸಂಬಂಧಿಸಿದಂತೆ ವಾರ್ಡ್ ಸಮಿತಿ ಸಭೆಯನ್ನು ದಿನಾಂಕ: 17-09-2022 ರಂದು ಆಯೋಜಿಸಿದ್ದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

ಸಭೆಯಲ್ಲಿ ಹಾಜರಿದ್ದವರ ವಿವರ:-

| ಕ್ರಮ ಸಂಖ್ಯೆ | ಅಧಿಕಾರಿಗಳ ಹೆಸರು | ಪದನಾಮ |
|---|---|---|
| 1 | ಶ್ರೀಮತಿ.ಶಾಂತ ಬಾಡಗಂಡಿ | ಸಹಾಯಕ ಕಾರ್ಯಪಾಲಕ ಅಭಿಯಂತರರು ಮುಖ್ಯ ಅಭಿಯಂತರರು (ಪೂರ್ವ) ರವರ ತಾಂತ್ರಿಕ ಸಹಾಯಕರು ಹಾಗೂ ನೋಡಲ್ ಅಧಿಕಾರಿ |
| 2 | ಶ್ರೀ.ಕೆ.ಎಲ್.ಸ್ವಾಮಿಲಾಲ್ | ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ 24 ಹೆಚ್.ಬಿ.ಆರ್ ಬಡಾವಣೆ |
| 3 | ಶ್ರೀ.ಬಿ.ಎನ್.ಗೋಪಾಲ್ | ಕೆಲಸ ಪರಿವೀಕ್ಷಕರು ವಾ-24 |
| 4 | ಪಶುಪಾಲನಾ ಇಲಾಖೆ ಕಛೇರಿ | ಪೂರ್ವ ವಲಯ |
| 5 | ಶ್ರೀ.ಶ್ರೀರಾಮ್.ಆರ್ | ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕೆಲಸ ಪರಿವೀಕ್ಷಕರು |
| 6 | ಶ್ರೀ.ಎಸ್.ಜೆ.ತೋಳ್ವಾಡಿ | ಹೆಚ್.ಬಿ.ಆರ್ ಬಡಾವಣೆಯ ಕ್ಷೇಮಾಭಿವೃದ್ಧಿ ಸಂಘ |
| 7 | ಶ್ರೀ.ಗಂಗಾಧರ್ | ಹೆಣ್ಣೂರು ಸ್ಥಳೀಯರು |
| 8 | ಶ್ರೀ.ವಿಕ್ರಂ ಮೈಲಾರ ವಿಜಯ | ಸ್ಥಳೀಯರು |
| 9 | ಶ್ರೀ.ಪ್ರಮೋದ್.ಬಿ.ಎಂ | ಮಾರ್ಷಲ್ |
| 10 | ಶ್ರೀ.ಸತೀಶ್ ತಿಮ್ಮೇಗೌಡ | ಸ್ಥಳೀಯರು |
| 11 | ಶ್ರೀ.ಬಾಬು | ಸ್ಥಳೀಯರು |
| 12 | ಶ್ರೀ.ಅಭಿಷೇಕ್.ಎಸ್ | ಸ್ಥಳೀಯರು |
| 13 | ಶ್ರೀ.ಉದಯಶಂಕರ್ | ಸ್ಥಳೀಯರು |
| 14 | ಶ್ರೀಮತಿ.ಪುಷ್ಪ | ಸ್ಥಳೀಯರು |
| 15 | ಶ್ರೀ.ನಾರಾಯಣಸ್ವಾಮಿ.ಎಂ | ಸ್ಥಳೀಯರು |
| 16 | ಶ್ರೀ.ಶಾದಾದ್ ರಫೀಕ್ | ಸ್ಥಳೀಯರು |
| 17 | ಶ್ರೀ.ರಘುರಾಂ ಬಂಡಾರಿ.ಕೆ | ಸ್ಥಳೀಯರು |
| 18 | ಶ್ರೀ.ಕೆ.ಸಿ.ರೆಡ್ಡಿ | ಸ್ಥಳೀಯರು |
| 19 | ಶ್ರೀ.ವೆಂಕಟೇಶ್ | ಸ್ಥಳೀಯರು |
| 20 | ಶ್ರೀ.ಸುನಿಲ್.ಆರ್ | ಸ್ಥಳೀಯರು |

| | | |
|---|---|---|
| 21 | ಶ್ರೀಮತಿ.ಕಾವ್ಯ.ಜಿ.ಆರ್ | ಸ್ಥಳೀಯರು |
| 22 | ಶ್ರೀ.ಚಂದ್ರಶೇಖರ್.ಎಸ್ | ಸ್ಥಳೀಯರು |
| 23 | ಶ್ರೀ.ಜುಬೈರ್ ಅಶ್ರಫ್ | ಸ್ಥಳೀಯರು |
| 24 | ಶ್ರೀ.ಜಾರ್ಜ್.ಕೆ.ಎಕ್ಸ್ | ಸ್ಥಳೀಯರು |
| 25 | SASI C NAIR | ಸ್ಥಳೀಯರು |
| 26 | ಶ್ರೀ.ಮದನ್ ಪ್ರಸಾದ್ | ಸ್ಥಳೀಯರು |

ಈ ಸಭೆಗೆ ಹಾಜರಾಗಿದ್ದ ಅಧ್ಯಕ್ಷರು (ನೋಡಲ್ ಅಧಿಕಾರಿ) ಹಾಗೂ ಅಧಿಕಾರಿಗಳನ್ನು ವಾರ್ಡ್‌ನ ಸದಸ್ಯ ಕಾರ್ಯದರ್ಶಿ ಹಾಗೂ ಸಂಚಾಲಕರು, ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಅಧಿಕಾರಿ / ನೌಕರರು ಹಾಗೂ ಸದಸ್ಯರುಗಳನ್ನು ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

1. **<u>ಅರಣ್ಯ ಇಲಾಖೆ:-</u>** ವಾರ್ಡ್ ವ್ಯಾಪ್ತಿಯಲ್ಲಿನ 4ನೇ ಬ್ಲಾಕ್‌ನಲ್ಲಿ ಈಗಾಗಲೇ ಪಾರ್ಕ್ ಅನ್ನು ಅಭಿವೃದ್ಧಿ ಪಡಿಸಿದ್ದು, ಮತ್ತೊಮ್ಮೆ ಸದರಿ ಪಾರ್ಕ್ ಅನ್ನು ಅಭಿವೃದ್ಧಿಪಡಿಸುತ್ತಿದ್ದಾರೆಂದು ಮತ್ತು ಪಾರ್ಕ್ ಅಭಿವೃದ್ಧಿ ಪಡಿಸುತ್ತಿರುವ ಬಗ್ಗೆ ಹೊಸದಾಗಿ ಟೆಂಡರ್ ಪ್ರತಿಕ್ರಿಯೆ ಬಗ್ಗೆ ಮಾಹಿತಿಯನ್ನು ಒದಗಿಸಬೇಕೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

   ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಉಪ-ಅರಣ್ಯಾಧಿಕಾರಿಗಳು (ಪೂರ್ವ) ವಲಯ ರವರಿಗೆ ಮಾಹಿತಿಯನ್ನು ಒದಗಿಸಬೇಕೆಂದು ತಿಳಿಸಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

   **<u>(ಕ್ರಮ:- ಅರಣ್ಯ ಇಲಾಖೆ (ಪೂರ್ವ) ಇಲಾಖೆ ಬೆಂಗಳೂರು)</u>**

2. **<u>ಕಾಮಗಾರಿ ಇಲಾಖೆ:-</u>** ವಾರ್ಡ್ ವ್ಯಾಪ್ತಿಯಲ್ಲಿ ಮೆಟ್ರೋ ಕಾಮಗಾರಿ ನಡೆಯುತ್ತಿರುವುದರಿಂದ 4ನೇ ಮತ್ತು 5ನೇ ಬ್ಲಾಕ್‌ನಲ್ಲಿರುವ ಸರ್ವೀಸ್ ರಸ್ತೆಯು ಮುಚ್ಚಿರುವುದರಿಂದ ನಾಗವಾರ ಮುಖ್ಯರಸ್ತೆಯಿಂದ 5ನೇ ಕ್ರಾಸ್ ರಸ್ತೆಯ ಮುಖಾಂತರ ವಾಹನಗಳು ಸಂಚರಿಸ ಬೇಕಾಗಿರುವುದರಿಂದ ಈ ರಸ್ತೆಯನ್ನು ಅಭಿವೃದ್ಧಿ ಪಡಿಸಬೇಕೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

   ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ-ವಿಭಾಗ ರವರಿಗೆ ಕ್ರಮ ಕೈಗೊಳ್ಳುವಂತೆ ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

   **<u>(ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ-ವಿಭಾಗ ಬೆಂಗಳೂರು)</u>**

3. **<u>ರಸ್ತೆಮೂಲಭೂತ ಸೌಕರ್ಯ ವಿಭಾಗ:-</u>** ವಾರ್ಡ್ ವ್ಯಾಪ್ತಿಯಲ್ಲಿ, ಮೇಜರ್ ರಸ್ತೆಗಳನ್ನು ಅಭಿವೃದ್ಧಿ ಪಡಿಸಲು ಟೆಂಡರ್ ಶೂರ್ ಯೋಜನೆ ಅಡಿಯಲ್ಲಿ ರಸ್ತೆಯ ಕಾಮಗಾರಿ ಹೆಸರು, ಟೆಂಡರ್ ಅವಧಿ, ಸ್ಪೆಸಿಫಿಕೇಷನ್ ಬಗ್ಗೆ ಮಾಹಿತಿ ಒದಗಿಸಲು ಸಭೆಯಲ್ಲಿ ತಿಳಿಸಿದರು.

   ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ವಿಭಾಗ (ಪೂರ್ವ) ವಲಯ ರವರಿಗೆ ಕ್ರಮ ಕೈಗೊಳ್ಳಲು ತಿಳಿಸುವಂತೆ ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

   **<u>(ಕ್ರಮ:- ರಸ್ತೆ ಮೂಲಭೂತ ಸೌಕರ್ಯ ವಿಭಾಗ (ಪೂರ್ವ) ವಲಯ ಬೆಂಗಳೂರು)</u>**

4. <u>ಆರೋಗ್ಯ ಇಲಾಖೆ:-</u> ವಾರ್ಡ್ ವ್ಯಾಪ್ತಿಯ ಭೈರವೇಶ್ವರ ಲೇಔಟ್ 2ನೇ, 3ನೇ ಮುಖ್ಯರಸ್ತೆ ಹಾಗೂ ವಾರ್ಡ್‌ವಾರು ಸೊಳ್ಳೆಗಳ ಹಾವಳಿ ಹೆಚ್ಚಾಗಿರುವುದರಿಂದ ಔಷಧಿ, ಫಾಗಿಂಗ್ ಮತ್ತು ಸ್ಪ್ರೇಯಿಂಗ್ ಸಿಂಪಡಿಸಬೇಕೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

ಕೆಲವು ಹಬ್ಬದ ದಿನಗಳಲ್ಲಿ ಕುರಿ ಮೇಕೆಗಳನ್ನು ರಸ್ತೆಯ ಬದಿಗಳಲ್ಲಿ ಎಲ್ಲೆಂದರಲ್ಲಿ ವ್ಯಾಪಾರ ಮಾಡುವುದು ಕಂಡು ಬರುತ್ತಿದ್ದು, ಗಣಪತಿ ಹಬ್ಬಕ್ಕೆ ಬಿ.ಬಿ.ಎಂ.ಪಿ ವತಿಯಿಂದ ಏಕಗವಾಕ್ಷಿ ಮುಖಾಂತರ ವ್ಯವಸ್ಥೆಮಾಡಿದಂತೆ ಕುರಿ ಮೇಕೆ ವ್ಯಾಪರಕ್ಕೂ ನಿರ್ದಿಷ್ಟವಾದ ಜಾಗವನ್ನು ನಿಗಧಿಪಡಿಸಬೇಕೆಂದು ತಿಳಿಸಿರುತ್ತಾರೆ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಆರೋಗ್ಯ ವೈದ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗ ರವರಿಗೆ ಕ್ರಮ ಕೈಗೊಳ್ಳಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

<u>(ಕ್ರಮ:- ಆರೋಗ್ಯ ವೈಧ್ಯಾಧಿಕಾರಿಗಳು ಸರ್ವಜ್ಞನಗರ ವಿಭಾಗ ಬಿ.ಬಿ.ಎಂ.ಪಿ ಬೆಂಗಳೂರು)</u>

5. <u>ಬಿ.ಡಬ್ಲ್ಯೂ.ಎಸ್.ಎಸ್.ಬಿ:-</u> ವಾರ್ಡ್ ವ್ಯಾಪ್ತಿಯಲ್ಲಿನ ಬಿ.ಡಬ್ಲ್ಯೂ.ಎಸ್.ಎಸ್.ಬಿ.ರವರು ಹಾಗೂ ಬೃಹತ್ ಮಳೆನೀರು ಗಾಲುವೆ ಇಲಾಖೆಯ ಬಗ್ಗೆ ಚರ್ಚಿಸಲು ಇಲಾಖೆಯವರು ಅನುಪಸ್ಥಿತಿಯಿದ್ದುದರಿಂದ ಇಲಾಖೆಯ ಅಧಿಕಾರಿಗಳನ್ನು ಮುಂದಿನ ವಾರ್ಡ್ ಸಮಿತಿ ಸಭೆಗೆ ತಪ್ಪದೆ ಹಾಜರಾಗಲು ಸೂಚಿಸಿರುತ್ತಾರೆ.

<u>(ಕ್ರಮ:- ಸ.ಕಾ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ ಉಪ-ವಿಭಾಗ ಕಲ್ಯಾಣನಗರ ಬೆಂಗಳೂರು)</u>

6. <u>ಬೃಹತ್ ಮಳೆನೀರು ಗಾಲುವೆ ವಿಭಾಗ (ಬಿ.ಬಿ.ಎಂ.ಪಿ)</u> ವಾರ್ಡ್ ವ್ಯಾಪ್ತಿಯ ರಾಜಕಾಲುವೆಯಲ್ಲಿ ಡೀಸಿಲ್ಟಿಂಗ್ ನಿಯತಕಾಲಕ್ಕೆ ಪೂರ್ಣ ಪ್ರಮಾಣದಲ್ಲಿ ಮಾಡದೇ ಇರುವುದರಿಂದ ರಾಜ ಕಾಲುವೆಗೆ ಸರಾಗವಾಗಿ ನೀರು ಹರಿಯುತ್ತಿಲ್ಲವಾದ್ದರಿಂದ ರಸ್ತೆಯ ಚರಂಡಿಗಳಲ್ಲಿ ಹಿಮ್ಮುಖವಾಗಿ ನೀರು ಹರಿಯುತ್ತಿದೆ ಎಂದು ತಿಳಿಸಿರುತ್ತಾರೆ.

ಸದರಿ ವಿಷಯದ ಬಗ್ಗೆ ವಾರ್ಡ್ ಸಮಿತಿ ಸಭೆಗೆ ಹಾಜರಾಗಿರದ ಅಧಿಕಾರಿಗಳನ್ನು ವಾರ್ಡ್ ಸಮಿತಿ ಸಭೆಗೆ ತಪ್ಪದೆ ಹಾಜರಾಗಲು ನೋಡಲ್ ಅಧಿಕಾರಿ ರವರು ತಿಳಿಸಿರುತ್ತಾರೆ.

<u>(ಕ್ರಮ:- ಸ.ಕಾ.ಅ ಬೃಹತ್ ಮಳೆನೀರು ಗಾಲುವೆ ವಿಭಾಗ (ಬಿ.ಬಿ.ಎಂ.ಪಿ)</u>

7. <u>ವಿದ್ಯುತ್ ವಿಭಾಗ:-</u> ವಾರ್ಡ್ ವ್ಯಾಪ್ತಿಯಲ್ಲಿ ಹಾಗೂ ಹೆಣ್ಣೂರು ಸುತ್ತಮುತ್ತಲಿನ ಪ್ರದೇಶದಲ್ಲಿ ಬಹುತೇಕ ಎಲ್.ಇ.ಡಿ ಬೀದಿ ದೀಪಗಳು ದುರಸ್ಥಿಯಲ್ಲಿದ್ದು, ಸಮಯಕ್ಕೆ ಸರಿಯಾಗಿ ಬಲ್ಪ್ ಹಾಗೂ ಸ್ವಿಚಸ್‌ಗಳು ಬದಲಾಯಿಸುತ್ತಿಲ್ಲವೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

ಸದರಿ ವಿಷಯದ ಬಗ್ಗೆ ವಾರ್ಡ್ ಸಮಿತಿ ಸಭೆಗೆ ವಿದ್ಯುತ್ ವಿಭಾಗದ ಅಧಿಕಾರಿಗಳು ಹಾಜರಾಗಿರದ ಕಾರಣ ಮುಂದಿನ ವಾರ್ಡ್ ಸಮಿತಿ ಸಭೆಗೆ ತಪ್ಪದೆ ಹಾಜರಾಗುವಂತೆ ತಿಳಿಸಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

<u>(ಕ್ರಮ:- ಕಾ.ಪಾ.ಅ ವಿದ್ಯುತ್ ವಿಭಾಗ)</u>

8. <u>ಪಶುಪಾಲನಾ ಇಲಾಖೆ:-</u> ವಾರ್ಡ್ ವ್ಯಾಪ್ತಿಯ ವಾರ್ಡ್ ವ್ಯಾಪ್ತಿಯಲ್ಲಿ ಹಸುಗಳು ರಸ್ತೆಯಲ್ಲಿ ಸಂಚರಿಸುತ್ತಿದ್ದು, ಇದರಿಂದ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಮತ್ತು ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿರುವುದಾಗಿ ತಿಳಿಸಿರುತ್ತಾರೆ.

ಮೇಲ್ಕಂಡ ವಿಷಯದ ಬಗ್ಗೆ ಸಂಬಂಧಪಟ್ಟ ಇಲಾಖೆಯ ಗಮನಕ್ಕೆ ತರಲಾಗುವುದು ಎಂದು ನೋಡಲ್ ಅಧಿಕಾರಿಗಳು ತಿಳಿಸಿರುತ್ತಾರೆ.

<u>(ಕ್ರಮ:- ಪಶುಪಾಲನಾ ಇಲಾಖೆ ಬಿ.ಬಿಎಂ.ಪಿ (ಪೂರ್ವ) ವಲಯ ಬೆಂಗಳೂರು)</u>

೯. <u>ಕಲ್ಯಾಣ ಇಲಾಖೆ:-</u> ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ **ಕಲ್ಯಾಣ ಇಲಾಖೆ ವತಿಯಿಂದ ಅರ್ಹ ಫಲಾನುಭವಿಗಳಿಗೆ ಲ್ಯಾಪ್‌ಟಾಪ್, ವಿದ್ಯಾರ್ಹತೆಗಾಗಿ ಮತ್ತು Mentally Challenged** ರವರಿಗೆ ಧನ ಸಹಾಯ ನೀಡಲು ಕಲ್ಯಾಣ ಇಲಾಖೆ ವತಿಯಿಂದ ಕೆಳಕಂಡ ಫಲಾನುಭವಿಗಳ ಪಟ್ಟಿಯನ್ನು ಮಂಡಿಸಿದರು.

## <u>ಸಹಾಯಕ ಕಲ್ಯಾಣ ಇಲಾಖೆ (ಪೂರ್ವ) ವಲಯ</u>

## <u>Welfare Office East Zone Mayohall Bangalore</u>

| EDUCATION (FEES) | | |
|---|---|---|
| **Sl No** | **Ward No** | **Name** |
| 1 | 24 | Manyashree |
| 2 | 24 | Lokamithra.N |
| 3 | 24 | Shreyas.G |
| 4 | 24 | Dhanush.M |
| 5 | 24 | Hari Prasad.S |
| **HANDICAP** | | |
| 1 | 24 | Naveen |
| **Mentally Challenged** | | |
| 1 | 24 | Sathya Sheelan |
| 2 | 24 | Tristin Savio |

ಮುಂದುವರೆದು ದಿನಾಂಕ: 17.09.2022 ರಂದು ವಾರ್ಡ್ ಸಮಿತಿ ಸಭೆಗೆ ಗೈರು ಹಾಜರಾಗಿರುವ ರಸ್ತೆ ಮೂಲಭೂತ ಸೌಕರ್ಯ ವಿಭಾಗ, ಬೃಹತ್ ಮಳೆನೀರುಗಾಲುವೆ ವಿಭಾಗ, ಪೊಲೀಸ್ ಇಲಾಖೆ, ಪೊಲೀಸ್ ಇಲಾಖೆ (ಸಂಚಾರಿ), ತೋಟಗಾರಿಕೆ ಇಲಾಖೆ, ಬೆಸ್ಕಾಂ ಇಲಾಖೆ ಮತ್ತು ಅರಣ್ಯ ಇಲಾಖೆ, ಅಧಿಕಾರಿಗಳನ್ನು ಮುಂದಿನ ವಾರ್ಡ್ ಸಮಿತಿ ಸಭೆಗೆ ಅಧಿಕಾರಿಗಳು ತಪ್ಪದೇ ಹಾಜರಾಗಲು ತಿಳಿಸಲಾಗಿದೆ. ತಪ್ಪಿದ್ದಲ್ಲಿ ಮೇಲಾಧಿಕಾರಿಗಳಿಗೆ ವರದಿ ಮಾಡಲು ವಾರ್ಡ್‌ನ ನೋಡಲ್ ಅಧಿಕಾರಿ ರವರು ಸೂಚಿಸಿರುತ್ತಾರೆ.

ವಂದನೆಗಳೊಂದಿಗೆ,

ಶ್ರೀ.ಕೆ.ಎಲ್.ಸ್ವಾಮಿಲಾಲ್
ಸದಸ್ಯ ಕಾರ್ಯದರ್ಶಿ ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ 24ಹೆಚ್.ಬಿ.ಆರ್ ಬಡಾವಣೆ

ಶ್ರೀಮತಿ.ಶಾಂತಾ ಬಾಡಗಂಡಿ
ಸಹಾಯಕ ಕಾರ್ಯಪಾಲಕ ಅಭಿಯಂತರರು
ಮುಖ್ಯ ಅಭಿಯಂತರರು (ಪೂರ್ವ) ರವರ
ತಾಂತ್ರಿಕ ಸಹಾಯಕರು ಹಾಗೂ ನೋಡಲ್ ಅಧಿಕಾರಿ

ಪ್ರತಿಯನ್ನು:

1. ಮಾನ್ಯ ಶಾಸಕರು, ಸರ್ವಜ್ಞನಗರ ವಿಧಾನ ಸಭಾಕ್ಷೇತ್ರ ರವರ ಅವಗಾಹನೆಗಾಗಿ ಸಲ್ಲಿಸಿದೆ.
2. ಕೌನ್ಸಿಲ್ ಕಾರ್ಯದರ್ಶಿಗಳು ಬಿ.ಬಿ.ಎಂ.ಪಿ ಕೇಂದ್ರ ಕಛೇರಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
4. ಮುಖ್ಯ ಅಭಿಯಂತರರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
5. ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ) ರವರ ಅವಗಾಹನೆಗೆ ಸಲ್ಲಿಸಿದೆ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ ವಿಭಾಗ) 16ನೇ ಮಹಡಿ, ಪಿ.ಯು.ಬಿ. ಬಿಲ್ಡಿಂಗ್ ಮೆಯೋಹಾಲ್ ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ವಿಭಾಗ ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು ಬೃಹತ್ ಮಳೆ ನೀರುಗಾಲುವೆ ವಿಭಾಗ ಬಿಬಿಎಂಪಿ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕಲ್ಯಾಣನಗರ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು ಹೆಚ್.ಬಿ.ಆರ್ ಲೇಔಟ್ ಉಪ ವಿಭಾಗ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
11. ಪಶು ವೈಧ್ಯಾಧಿಕಾರಿಗಳು ಬಿ.ಬಿ.ಎಂ.ಪಿ ಪೂರ್ವ ವಲಯ ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
12. ಕಛೇರಿ ಕಡತಕ್ಕೆ.